ಅಹವಾಲು ಹೆಚ್ಚಾಗಲು ಪೊಲೀಸರು ಕೊಂಗನನ್ನು ಸ್ಮಶಾನಕ್ಕೆ ತಂದುಬಿಟ್ಟು, ತಿರುಮೊಳಿಗೆ ಕೇಸು ಸಾಬೀತಾಗುವವರೆಗೆ ಇವನು ಸ್ಮಶಾನದಿಂದ ತಪ್ಪಿಸಿಕೊಂಡು ಹೋದರೆ ನೀನೇ ಕೋರ್ಟಿಗೆ ಹಾಜರಾಗಬೇಕೆಂದು ಎಚ್ಚರಿಕೆ ಕೊಟ್ಟರು.

ತಿರುಮೊಳಿ, 'ಸಾಮಿಯಾರೆ ನ್ಯಾಯ ಫೈಸಲ್ಲಾಗುವವರೆಗೆ ಗಂಡನನ್ನೂ, ಕೊಂಗನನ್ನೂ ನೀವೇ ಲಾಕಪ್ಪಿನಲ್ಲಿ ಇಟ್ಟುಕೊಳ್ಳಿ. ಸತ್ತವರು ಬಂದಲ್ಲಿ ಕೊಂಗುವನ್ನು ಒಂದೊತ್ತು ಕಳಿಸಿ. ಹಾಗೆ ನೀವು ಕಳಿಸದೆಯೇ ಇತ್ತ ಹೆಣ ಹೊತ್ತು ಬಂದವರು ಸ್ಮಶಾನದಲ್ಲಿ ಗಲಾಟಾಪಣ್ಣ ನೀವೇ ಜವಾಬ್ದಾರರು' ಎಂದು ಅವಳೂ ಪೊಲೀಸರಿಗೆ ಎಚ್ಚರಿಕೆಯ ಮಾತಾಡಿದಳು. ಅದರೊಂದಿಗೆ ಅವಳು ಮತ್ತೆ ಹೇಳಿದ್ದೆಂದರೆ, 'ನೀವು ಕೊಂಗುನಾದನನ್ನು ಸ್ಟೇಷನ್ನಿನಲ್ಲಿ ಬಿಟ್ಟು ಸ್ಮಶಾನಕ್ಕೆ ಪೋಡಾ ಅಂದಲ್ಲಿ ಅವನಿಗೆ ದಾರಿ ಗೊತ್ತಿಲ್ಲ. ಸ್ಮಶಾನದಿಂದ ನೀವಿರುವ ಜಾಗದ ದಾರಿಯೂ ಅವನಿಗೆ ಗೊತ್ತಿಲ್ಲ. ನೀವೇ ಜೀಪಿನಲ್ಲಿ ಕರೆತಂದು ಬಿಡಬೇಕು' ಅಂದವಳು ಕಡೆಯದಾಗಿ ಕರುಮಾರಿಯಮ್ಮನ ಆಣೆಗೂ, ಈ ಹೆಣ್ಣು ಕೂಸಿನ ಸಾಕ್ಷಿಯಾಗೂ ಹೆಣ ಎತ್ತಿರುವವರು ಯಾರಂತ ಗೊತ್ತಿಲ್ಲವೆಂದಳು.

ಪೊಲೀಸರು, ಈ ಹೆಣ್ಣು ಹೆಂಗಸು ಹೆತ್ತ ಕೂಸಿನ ತಲೆಯ ಮೇಲೆ ಕೈ ಮಡಗಿ ಆಣೆ ಇಡುತ್ತಿರುವುದು ನಿಜವಿದ್ದರೂ ಇರಬಹುದೆಂದು ಬಗೆದು ಆವತ್ತಿನಿಂದ ಎಂಟತ್ತು ದಿನ ಸ್ಮಶಾನದ ಕಾಂಪೌಂಡಿನ ಆಚೆ ಈಚೆ, ಹುಣಸೆಮರದ ಮೇಲೆ ಕೂತು ಕಾಯ್ದರು. ಆ ಒಂದು ದಿನಮಾನದಲ್ಲಿ ಅರ್ಧರಾತ್ರಿಯಾಗುತ್ತ ಹೊಸದಾಗಿ ಹೆಣ ಹೂತ ಜಾಗ ಅಗೆದು ಶವ ಎತ್ತುತ್ತಿದ್ದವರು ಅದನ್ನು ಚೀಲಕ್ಕೆ ತುರುಕಿ ಕಾಂಪೌಂಡು ಆಚೆಗೆ ನಿಂತ ಆಂಬುಲೆನ್ಸಿಗೆ ಹಾಕಿ ಅಲ್ಲಿಂದ ವಾಹನವು ಕೆಂಪು ಲೈಟು ಹತ್ತಿಸಿಕೊಂಡು ಮತ್ಯಾವುದೋ ನಗರದ ಮತ್ತೊಂದು ಮೆಡಿಕಲ್ ಕಾಲೇಜಿನತ್ತ ಹೊರಡುವಲ್ಲಿ ಪೊಲೀಸರು ಜೀಪು ಹತ್ತಿ ವ್ಯಾನು ಹಿಡಿದರು. ಆ ಮುಂದಿನ ಮೂರು ಗಳಿಗೆಯಲ್ಲಿಯೇ ಮೊಬೈಲು ದನಿ ಪಟ್ಟಣದಿಂದ ಪಟ್ಟಣಕ್ಕೆ ದಾಟಿ, ಕಿವಿಯಿಂದ ಕಿವಿಗೆ ತಾಗಿ ಅತ್ತಿಂದ ದೊಡ್ಡವರ ಅಪ್ಪಣೆಯು ಪೊಲೀಸರ ಕರ್ಣಪಟಲಕ್ಕೆ ತಟ್ಟಲು ಬೇರೆ ಗತಿಯಿಲ್ಲದ ಮುಖದಲ್ಲಿ ಅದೇ ಪೊಲೀಸರು ಸ್ಟೇಷನ್ನಿನ ದಾರಿ ಹಿಡಿದರು.

ಈ ನಡುವೆ ಅಳಗಿರಿ ಚೆಟ್ಟಿಯಾರರು ತಿರುಮೊಳಿಯನ್ನು ಕರೆಸಿ ಒಂದು ತಿಂಗಳ ಸಂಬಳ ಮುಫತ್ತಾಗಿ ನೀಡಿ, 'ಪೆಣ್ಣೆ ನೀನು ಇಲ್ಲಿ ಕೆಲಸ ಕೇಳಿಕೊಂಡು ಬಂದಾಗ ಹೇಳಿದ್ದು ನಿಜ. ನಿನ್ನ ಗಂಡನಿಗೆ ಗುಹ್ಯ ರೋಗವಿದೆ. ಯಾವಾಗಲೂ ಎರಡು ಕೈ ಮುಷ್ಟಿಯನ್ನು ಅಲ್ಲೇ ಕಟ್ಟಿಕೊಂಡು ಮಾತಾಡುವನು. ನಮ್ಮ ಕಂಪನಿಯ ಮರ್ಮಾಂಗ ರೋಗತಜ್ಞ ಡಾಕ್ಟರಿಗೂ ತೋರಿಸಲಿಲ್ಲ. ಇದೀಗ ಜೈಲು ಸೇರುತ್ತಿದ್ದಾನೆ, ಅಂಥವನಿಂದ ಕಂಪನಿಗೆ ಲಾಭವಿಲ್ಲ. ಇಕಾ ಒಂದು ತಿಂಗಳ ಬಿಟ್ಟಿ ಸಂಬಳ. ಅದೋ ಅಲ್ಲಿ ಲಾರಿಯ ಕ್ಯಾಬೀನಿನಲ್ಲಿ ನಿನ್ನ ಗಂಡ ಇಟ್ಟುಕೊಂಡಿದ್ದ ಪೆಟ್ಟಿಗೆ ಇದೆ. ಅದೆನ್ನಮೋ ತೆರಿಯಾದು, ಕೊಂಡು ಪೋ' ಅಂದರು.



ತಿರುಮೊಳಿ ಅಳಿಗಿರಿಯವರ ಕಾಲು ಹಿಡಿದು, 'ಸಾಮಿಯೇ, ನಾನು ಆಗ ಹೇಳಿದ್ದು ಸುಳ್ಳು. ಇಲ್ಲಿ ಕಸ ಗುಡಿಸುವ ವೇಲೆ ಗಿಟ್ಟಿಸಲು ಹಾಗೆ ಹೇಳಿದೆ. ನನ್ನ ಗಂಡ ಯಾವತ್ತೂ ಕಾಯಿಲೆ ಮಲಗಿಲ್ಲ. ಗುಳಿಗೆ ತಿಂದು ನೀರು ಕುಡಿದಿಲ್ಲ' ಎಂದರೆ ಚೆಟ್ಟಿಯಾರರು, 'ಇಲ್ಲ ಇಲ್ಲ ನೀನು ಆವತ್ತು ಹೇಳಿದ್ದೇ ನಿಜ. ಈಗ ಹೇಳುತ್ತಿರುವುದೇ ಸುಳ್ಳು. ಅಂಥ ರೋಗದವನು